
# ಮಹೇಂದ್ರನಾಥ ಗುಪ್ತ

❑ ಕುಮಾರಿ ಸ್ವರ್ಣಗೌರಿ

**'ಶ್ರೀರಾಮಕೃಷ್ಣ ವಚನವೇದ'ವನ್ನು ಓದುವವರಿಗೆ ರಾಮಕೃಷ್ಣ ಜ್ಯೋತಿ ಎಷ್ಟು ಪ್ರಖರವಾಗಿ ಎದ್ದು ಕಾಣುತ್ತದೆ ಎಂದರೆ ಗ್ರಂಥಕರ್ತನ ಸುಳಿವೇ ನಮ್ಮ ಗಮನಕ್ಕೆ ಬರುವುದಿಲ್ಲ. ಅಷ್ಟರಮಟ್ಟಿಗೆ ತಮ್ಮನ್ನು ಮರೆಮಾಚಿಕೊಂಡಿದ್ದಾರೆ ಮಹೇಂದ್ರನಾಥ ಗುಪ್ತರು. ಈ 'ಗುಪ್ತ' ಜೀವನದ ಮೇಲೆ ಬೆಳಕು ಚೆಲ್ಲಿರುವ ಕುಮಾರಿ ಸ್ವರ್ಣಗೌರಿಯವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು.**



'ಪಂಚಮ ವೇದ', 'ಹೊಸ ಭಾಗವತ' ಎಂಬ ಬಿರುದಾಂಕಿತಗಳನ್ನು ಹೊತ್ತ ಕನ್ನಡವಲ್ಲಿನ ಶ್ರೀರಾಮಕೃಷ್ಣ ವಚನವೇದ ಅಥವಾ ಬಂಗಾಳಿಯಲ್ಲಿ ಶ್ರೀರಾಮಕೃಷ್ಣ ಕಥಾಮೃತ ಭಕ್ತವೃಂದದವರಿಗೆಲ್ಲಾ ದಿವ್ಯಾಮೃತವನ್ನು ಉಣಬಡಿಸುವ ಅತ್ಯಂತ ಶ್ರೇಷ್ಠ ಗ್ರಂಥ ಇದನ್ನು ರಚಿಸಲು ಶ್ರೀರಾಮಕೃಷ್ಣರೇ ಆರಿಸಿದ ವ್ಯಕ್ತಿಯ ಜೀವನವೂ ಭವ್ಯ ಹಾಗೂ ದಿವ್ಯವಾದುದು.

ಭಾಗವತದ ವ್ಯಾಸರಂತೆ ಕಥಾಮೃತದ ವ್ಯಾಸರಾದ ಮಹೇಂದ್ರನಾಥ ಗುಪ್ತರು ಭಕ್ತಸಮೂಹದಲ್ಲೆಲ್ಲಾ 'ಮ' (M) ಅಥವಾ ಮಾಸ್ಟರ್ ಮಹಾಶಯ ಎಂದೇ ಚಿರಪರಿಚಿತರು. ಭಗವಂತನ ಈ ರಾಜ್ಯದಲ್ಲಿ ಪ್ರತಿಯೊಂದಕ್ಕೂ ಒಂದು ಸ್ಥಾನವುಂಟು. ಆತನ ಲೀಲೆಯಲ್ಲಿ ಪ್ರತಿಯೊಬ್ಬನ ಪಾತ್ರವೂ ಪೂರ್ವನಿಶ್ಚಿತ. ಅಂತೆಯೇ ಮುಂದೆ ವ್ಯಾಸರಾಗಬೇಕಾದ ಮಹೇಂದ್ರನಾಥರು ದಿನಚರಿ ಬರೆಯುವ ಹವ್ಯಾಸವನ್ನು ತಮ್ಮ ಹದಿಮೂರನೇ ವರ್ಷ ವಯಸ್ಸಿನಲ್ಲಿ ಅಂದರೆ ಎಂಟನೇ ತರಗತಿ ಓದುತ್ತಿರುವಾಗಲೆ ರೂಢಿಸಿಕೊಂಡರು. ಆದ್ದರಿಂದಲೆ ಮುಂದೆ ಒಮ್ಮೆ ಶ್ರೀರಾಮಕೃಷ್ಣರ ನೇರ ಸಂನ್ಯಾಸೀ ಶಿಷ್ಯರಾದ ಸ್ವಾಮಿ ಶಿವಾನಂದರು ಶ್ರೀರಾಮಕೃಷ್ಣರ ನುಡಿಗಳನ್ನು ಬರೆದುಕೊಳ್ಳುವ ಪ್ರಯತ್ನ ಮಾಡುತ್ತಿದ್ದಾಗ, ತಕ್ಷಣವೇ ಶ್ರೀರಾಮಕೃಷ್ಣರು "ಈ ಕೆಲಸ ನಿನ್ನದಲ್ಲ, ಅದಕ್ಕಾಗಿ ಬೇರೆಯವರಿದ್ದಾರೆ" ಎಂದರು.

ಈ ಮಹತ್ಕಾರ್ಯದ ಹಿಂದಿದ್ದ ವ್ಯಕ್ತಿ ಎಂದೆಂದೂ 'ಮ' ಎಂಬ ಅಕ್ಷರದ ಹಿಂದೆ ಗೋಪ್ಯವಾಗಿರುವುದನ್ನು ಕುರಿತು ರಾಷ್ಟ್ರಕವಿ ಕುವೆಂಪು ಅವರು ಈ ರೀತಿ ಬರೆಯುತ್ತಾರೆ: "ಶ್ರೀರಾಮಕೃಷ್ಣರ ಹೆಸರು ಜಗದ್‌ವ್ಯಾಪಿಯಾಗುವಂತೆಯೂ ಅವರ ಉಪದೇಶಾಮೃತ ಲೋಕದ ಹೃದಯಕ್ಕೆ ಪ್ರವಹಿಸುವಂತೆಯೂ ಮಾಡಿದ ಮಹಾವ್ಯಕ್ತಿಗಳಲ್ಲಿ ಇಬ್ಬರು ಕಲಶಪ್ರಾಯವಾಗಿದ್ದಾರೆ. ಅವರಲ್ಲಿ ಒಬ್ಬರು ವಿಖ್ಯಾತನಾಮರು, ಮತ್ತೊಬ್ಬರು ಅಜ್ಞಾತರು ಅಥವಾ ಅನಾಮರು: ಸ್ವಾಮಿ ವಿವೇಕಾನಂದ ಮತ್ತು 'ಮ'! ಒಂದು, ಆಕಾಶದಲ್ಲಿ ತೊಳಗುವ ಸೂರ್ಯ, ಮತ್ತೊಂದು ಮನೆಮನೆಯ ಹೃದಯದ ಗುಡಿಯಲ್ಲಿ ಬೆಳಗುವ ಹಣತೆ, ನಂದಾದೀಪ, ಕತ್ತಲೆಯಲ್ಲಿ ಭಾಸ್ಕರನಿಲ್ಲದ ವೇಳೆಯಲ್ಲಿಯೂ ತಂಪಿನ ಕಾಂತಿ ಶಾಂತಿಗಳನ್ನು ಕಣ್ಣು ಕೋರೈಸದಂತೆ ನಿರಾಡಂಬರವಾಗಿ ನೀಡುವ ಸೊಡರು, ಮುದ್ದು ಸೊಡರು, ತಾಯ್ತನದ ಸೊಡರು, ಹಣತೆ ಸೊಡರು! ಆತನು ತನ್ನ ಪೂರ್ಣ ನಾಮದಿಂದ ಪ್ರಪಂಚದ ಸಂತೆಬಯಲಿಗೆ ಬರಲು ನಾಚಿ, ಹೇಸಿ, ಹೆದರಿ, 'ಮ' ಎಂಬ ಮೊದಲಕ್ಕರದಿಂದ ಮಾತ್ರ ತೆರೆಮರೆಯಿಂದ ಇಣುಕಿದ ಎಲೆಮರೆಯ ಮಿಣುಕು ಹೂ!"

ಮಹಾಮೇಧಾವಿಯಾದ ಮಹೇಂದ್ರನಾಥರು ಅಧ್ಯಯನದಲ್ಲಿ ಚುರುಕು. ಪ್ರೆಸಿಡೆನ್ಸಿ ಕಾಲೇಜಿನಿಂದ ಪದವಿಯನ್ನು ಪಡೆದ ಅವರು ಕೊಲ್ಕತಾ ವಿಶ್ವವಿದ್ಯಾನಿಲಯಕ್ಕೇ ಮೂರನೆಯ ರ್‍ಯಾಂಕ್‌ನಲ್ಲಿ ಉತ್ತೀರ್ಣರಾದರು. ಷಡ್ದರ್ಶನ, ಸಂಹಿತೆಗಳಲ್ಲಿ ಅಪಾರ ಪಾಂಡಿತ್ಯವನ್ನು ಪಡೆದಂತೆ ಪಾಶ್ಚಾತ್ಯ ತತ್ತ್ವಜ್ಞಾನದಲ್ಲೂ ಪರಿಣತರು. ಪುರಾಣ ಹಾಗೂ ಸಂಸ್ಕೃತ ಸಾಹಿತ್ಯದಲ್ಲಿ ಅವರನ್ನು ಪ್ರಮಾಣಭೂತರು ಎಂದೇ ಪರಿಗಣಿಸಲಾಗಿತ್ತು. ಅವರಲ್ಲಿದ್ದ ಅಪಾರ ಪ್ರತಿಭೆಗೆ ಮರುಳಾದ ಪಾಶ್ಚಾತ್ಯ ಗುರು ಸಿ.ಎಚ್. ಟಾನಿ (C.H. Tawney) ನಿವೃತ್ತರಾದಮೇಲೂ ಈತನೊಡನೆ ಇಂಗ್ಲೆಂಡಿನಿಂದ ಪತ್ರವ್ಯವಹಾರ ಮಾಡುತ್ತಿದ್ದರು! ಅಂದಿನ ಕಾಲದ ಅತ್ಯುನ್ನತ ಪರೀಕ್ಷೆಯಾದ ಐ.ಸಿ.ಎಸ್. ಪರೀಕ್ಷೆಗೆ ಕೂರುವ ಅವರ ಹೆಬ್ಬಯಕೆ

ನೆರವೇರದೆ ವ್ಯಾಸಂಗವನ್ನು ಪೂರ್ಣಗೊಳಿಸುವ ಮೊದಲೇ ಸಂಸಾರದ ಬಂಧನದಲ್ಲಿ ಸಿಲುಕಬೇಕಾಯಿತು.

ವಿವಾಹವಾದ ಐದಾರು ವರ್ಷಗಳಲ್ಲೇ ಸಂಸಾರದಲ್ಲಿ ಸಮಸ್ಯೆಗಳ ಮಹಾಪೂರವೇ ಹರಿಯಿತು. ಬಾಲ್ಯದಲ್ಲೇ ತಾಯಿಯು ತೀರಿಹೋದ ಕಾರಣ ಅವಿಭಕ್ತ ಕುಟುಂಬದ ಹೊಣೆಗಾರಿಕೆಯನ್ನು ಹೊರುವವರಿಲ್ಲದೆ ಮನೆಯ ಜಗಳಗಳು ಭರಿಸಲಾರದಾದವು. ಇನ್ನೂ ಹೆಚ್ಚು ಹೆಚ್ಚು ಹಣ ಗಳಿಸಿ ಸಂಸಾರವನ್ನು ನಿರ್ವಹಿಸ ಬೇಕೆಂಬ ತಂದೆಯ ಇಚ್ಛೆಯು ಸೂಕ್ಷ್ಮಮನಸ್ಸಿನ ಮಹೇಂದ್ರನಾಥ ರಿಗೆ ಸಹಿಸದೆ ಹೋಯಿತು. ಜಿಗುಪ್ಸೆಯಿಂದ ತನ್ನ ಜೀವನವನ್ನೇ ಕೊನೆಗಾಣಿಸಲು ನಿರ್ಧರಿಸಿದರು.

ಮನುಷ್ಯನ ಶೀಲನಿರ್ಮಾಣದಲ್ಲಿ ಸುಖಕ್ಕಿಂತ ದುಃಖವೇ ಪ್ರಮುಖ ಪಾತ್ರ ವಹಿಸುವುದು. ಜೀವನವನ್ನೇ ಕೊನೆಗಾಣಿಸಿ ಕೊಳ್ಳಬೇಕೆಂಬ ಆತ್ಮಹತ್ಯೆಯ ನಿರ್ಧಾರವು ಜೀವನದ ಶ್ರೇಷ್ಠ ಗುರಿಯಾದ ಮುಕ್ತಿಯ ಮಾರ್ಗಕ್ಕೆ ಒಯ್ದಿತು. ಮುಂದಿನ ದಿನಗಳಲ್ಲಿ ಯಾರಾದರೂ, "ನಿಮ್ಮ ಜೀವನದ ಅತ್ಯಂತ ಮಹತ್ವ ಪೂರ್ಣ ಘಟನೆ ಯಾವುದು?" ಎಂದು ಕೇಳಿದರೆ, "ಇಪ್ಪತ್ತೆಂಟರ ಹರೆಯದಲ್ಲಿ ಶ್ರೀರಾಮಕೃಷ್ಣರನ್ನು ಸಂಧಿಸಿದ್ದು" ಎಂದು ಹೇಳುವಾಗ ಅವರ ಕಣ್ಣುಗಳಲ್ಲಿ ಕಾಂತಿ ಮೂಡುತ್ತಿತ್ತು. ೨೬ನೇ ಫೆಬ್ರುವರಿ ೧೮೮೨ ಭಾನುವಾರದಂದು ರಾಮಕೃಷ್ಣರೊಡನೆ ಮೊದಲ ಭೇಟಿ, ನಂತರ ೧೬ನೇ ಆಗಸ್ಟ್ ೧೮೮೬ರಂದು ಶ್ರೀರಾಮಕೃಷ್ಣರ ಅಂತ್ಯಕಾಲವಾಗುವವರೆಗೂ ಅವರ ನಿಕಟವರ್ತಿ ಗಳಾಗಿದ್ದರು. ಈ ನಡುವೆ ಒಂದನೂರ ಎಪ್ಪತ್ತನಾಲ್ಕು ಬಾರಿ ಅವರನ್ನು ಭೇಟಿಯಾಗಿದ್ದರು! ಈ ಭೇಟಿಗಳ ಫಲವೇ 'ಕಥಾಮೃತ'. ಪರಿಣಾಮ ಅವರ ವ್ಯಕ್ತಿತ್ವದಲ್ಲಿ ಅದ್ಭುತ ಬದಲಾವಣೆ.

ನ್ಯೂಯಾರ್ಕ್ ವೇದಾಂತ ಸೊಸೈಟಿಯ ಸ್ವಾಮಿ ತಥಾಗತಾ ನಂದರ ಮಾತಿನಲ್ಲಿ, "ಶ್ರೀರಾಮಕೃಷ್ಣರ ಆಧ್ಯಾತ್ಮಿಕ ನೇತೃತ್ವದಲ್ಲಿ ಮಹೇಂದ್ರನಾಥರ ವ್ಯಕ್ತಿತ್ವವು ದಿವ್ಯವಾಗಿ ಅರಳಿ ನಿಂತಿತು. ದೃಷ್ಟಿಕೋನವು ಸಂಪೂರ್ಣವಾಗಿ ಬದಲಾಯಿತು. ಹೃದಯವು ಹಿಗ್ಗಿತು. ಮನಸ್ಸು ಏಕಾಗ್ರತೆಯನ್ನು ಪಡೆಯಿತು. ದೈವೀಕೃಪೆಯು ರೇಡಿಯಂನಂತೆ ಭೇದಿಸಿ ಒಂದು ಪೂರ್ಣ ವ್ಯಕ್ತಿತ್ವವು ಮೂಡಿತು. ಆತನ ಪಾಂಡಿತ್ಯವು ಜ್ಞಾನದಲ್ಲಿಯೂ, ಸೌಂದರ್ಯವು ಪವಿತ್ರತೆ ಯಲ್ಲಿಯೂ, ಬೌದ್ಧಿಕ ಅರಿವು ಭಕ್ತಿ ಹಾಗೂ ಅನುರಾಗದಲ್ಲಿಯೂ ಪರ್ಯವಸಾನವಾದವು."

ಅವರನ್ನು ಭೇಟಿಯಾಗಲು ಬಂದವರಿಗೆ ಐದೇ ನಿಮಿಷದಲ್ಲಿ ಪ್ರಪಂಚವೇ ಮರೆತುಹೋಗುತ್ತಿತ್ತು. ಅಲ್ಲದೆ ಪ್ರಪಂಚವು ನಶ್ವರ, ದೇವರೊಬ್ಬನೇ ಸತ್ಯ ಎಂದೂ ತೀವ್ರವಾಗಿ ಮನವರಿಕೆಯಾಗು ತ್ತಿತ್ತು. ಎಲ್ಲರೊಡನೆ ಅವ್ಯಾಹತವಾಗಿ ರಾಮಕೃಷ್ಣರ ಚಿಂತನ ಧಾರೆಯೇ ಹರಿಯುತ್ತಿತ್ತು. ಅವರೇ ಹೇಳುತ್ತಿದ್ದರು: "ನಾನೊಬ್ಬ ಸಾಮಾನ್ಯ ಮನುಷ್ಯ. ಹತ್ತಿರದಲ್ಲೇ ಇರುವ ಜ್ಞಾನಸಮುದ್ರ ದಿಂದ ಕೆಲವು ಕೊಡ ನೀರನ್ನು ತಂದಿಟ್ಟಿರುವೆ. ಯಾರಾದರೂ ಬಂದಾಗ ಅದನ್ನೇ ಅರ್ಪಿಸುವೆ. ಮತ್ತೇನು ಮಾತನಾಡಲಿ ನಾನು?" ಶ್ರೀರಾಮಕೃಷ್ಣರ ನಿರ್ಯಾಣಾನಂತರ ಕೆಲವು ವೇಳೆ ದಕ್ಷಿಣೇಶ್ವರದಿಂದ ತಮ್ಮ ಒದ್ದೆಯಾದ ಚೌಕವನ್ನು ತಂದು ಹಿಂಡಿ ಅದರ ನೀರನ್ನು ಭಕ್ತರ ಮೇಲೆ ಪ್ರೋಕ್ಷಿಸುತ್ತಾ, "ಶ್ರೀರಾಮಕೃಷ್ಣರು ಸ್ನಾನ ಮಾಡುತ್ತಿದ್ದ ಜಾಗದಿಂದ ಈ ನೀರನ್ನು ತಂದಿರುವೆ" ಎನ್ನು ತ್ತಿದ್ದರು. ಅವರ ತನುಮನವೆಲ್ಲಾ ರಾಮಕೃಷ್ಣಮಯವಾಗಿತ್ತು.

ಚಿಕ್ಕಂದಿನಿಂದಲೂ ತ್ಯಾಗಜೀವನದಲ್ಲಿ ಅವರಿಗಿದ್ದ ಒಲವಿನಿಂದ ಉಚ್ಚಮಟ್ಟದ ಆದರ್ಶಸಂಸಾರಿಯಾದರು. ಜೀವನ ಪೂರಾ ಒಂದೇ ಒಂದು ಜೊತೆ ಪಂಚೆ, ಎರಡು ಬಂಗಾಳಿ ಜುಬ್ಬಗಳು ಹಾಗೂ ಒಂದು ಜೊತೆ ಕಪ್ಪನೆ ಪಾದರಕ್ಷೆಗಳಷ್ಟೇ ಅವರ ಆಸ್ತಿ. ಪ್ರತಿ ತಿಂಗಳ ಕೊನೆಯಲ್ಲಿ ಅವರು ಮನಿ ಆರ್ಡರ್ ಫಾರಂಗಳನ್ನು ಭರ್ತಿ ಮಾಡುತ್ತಿದ್ದುದು ಸಂಕಷ್ಟದಲ್ಲಿ ಸಿಲುಕಿದ್ದ ನರೇಂದ್ರನಾಥರ (ಸ್ವಾಮಿ ವಿವೇಕಾನಂದ) ಕುಟುಂಬದವರಿಗೆ ಆರ್ಥಿಕ ನೆರವು ನೀಡುವುದಕ್ಕಾಗಿ. ಈ ವಿಷಯ ನರೇಂದ್ರನಾಥನಿಗೂ ತಿಳಿದಿರಲಿಲ್ಲ. ಮೂರು ಶಾಲೆಗಳಿಂದ ಬರುತ್ತಿದ್ದ ಸಂಬಳದಲ್ಲಿ ಮೊದಲನೇ ಶಾಲೆಯ ಸಂಬಳ ಬಾರಾನಗರ ಮಠದ ಸಾಧುಗಳಿಗೆ, ಎರಡನೆ ಯದು ಶ್ರೀಮಾತೆ ಶಾರದಾದೇವಿ ಹಾಗೂ ಭಕ್ತರಿಗೆ ಮತ್ತು ಮೂರನೆಯದರಿಂದ ತಮ್ಮ ಸಂಸಾರವನ್ನು ನಿರ್ವಹಿಸುತ್ತಿದ್ದರು.

ದಾಸಿಯಂತೆ ಮನೆಯಲ್ಲಿರಬೇಕೆಂಬ ರಾಮಕೃಷ್ಣರ ಉಪದೇಶ ದಂತೆ ತಮ್ಮ ಮನೆಯಲ್ಲಿ ತಾವೇ ಅತಿಥಿಯಂತೆ ವಾಸಿಸುತ್ತಿದ್ದರು. ಒಮ್ಮೆ ಕೆಲಸದ ನಿಮಿತ್ತ ರಾತ್ರಿ ತಡವಾಗಿ ಮನೆಗೆ ಬಂದರು. ಆದರೆ ಮನೆಯವರಿಂದ ಯಾವ ಸೇವೆಯನ್ನೂ ಸ್ವೀಕರಿಸಲು ಒಪ್ಪದೆ, "ನಿಮ್ಮ ಮನೆಯ ಪರಿಚಾರಿಕೆ ತಡವಾಗಿ ಬಂದರೆ ಅನ್ನವಿಕ್ಕುವಿರಾ?" ಎನ್ನುತ್ತಾ ಭಕ್ತನೊಬ್ಬನಿಂದ ಚಪಾತಿಗಳನ್ನು ಕೊಂಡು ತರಿಸಿ ತಿಂದು ಮಲಗಿದರು. ಇನ್ನೂ ಕೆಲವೊಮ್ಮೆ ಸಂಸಾರದ ಬಂಧನ ವನ್ನು ಮಾನಸಿಕವಾಗಿ ಕಿತ್ತೊಗೆಯಲು ರಾತ್ರಿಯ ವೇಳೆ ಒಬ್ಬರೇ ಎದ್ದು ಭಿಕಾರಿ ಹಾಗೂ ನಿರ್ಗತಿಕರ ಮಧ್ಯೆ ಹೋಗಿ ಮಲಗುತ್ತಿದ್ದ ರಂತೆ!

ಪತ್ನಿ ಹಾಗೂ ಮಕ್ಕಳಿಗೆ ಸಂಬಂಧಿಸಿದ ಕರ್ತವ್ಯವನ್ನು ತಿಳಿಸುತ್ತಾ ಒಮ್ಮೆ ರಾಮಕೃಷ್ಣರು, "ಅವರಿಗೆ ಆಹಾರ ಹಾಗೂ ಬಟ್ಟೆ ಒದಗಿಸು ವವರೆಗೆ ಮಾತ್ರವೇ ನಿನ್ನ ಕರ್ತವ್ಯ. ಮಗಳನ್ನು ಯೋಗ್ಯ ವರ ನಿಗಿತ್ತು ವಿವಾಹ ಮಾಡಿ, ಮಗನಿಗೆ ತನ್ನ ಕಾಲ ಮೇಲೆ ನಿಲ್ಲು ವಷ್ಟು ವಿದ್ಯಾಭ್ಯಾಸ ಕೊಡಿಸುವುದಷ್ಟೇ ತಂದೆಯ ಕರ್ತವ್ಯ" ಎಂದರು. ಇದನ್ನು ಅಕ್ಷರಶಃ ಪಾಲಿಸಿದರು ಈ ಗೃಹಸ್ಥಾಶ್ರಮದ ತ್ಯಾಗಿ. ತಮ್ಮ ದ್ವಿತೀಯ ಪುತ್ರಿಯ ವಿವಾಹಕಾರ್ಯವು ಬೆಳಗಿನ ಜಾವ ಎರಡು ಗಂಟೆಗೆ ಮುಗಿಯಿತು. ತಕ್ಷಣವೇ ಹಸೆಮಣೆಯಿಂದ ಎದ್ದು ತಮ್ಮ ಕೋಣೆಗೆ ಹೋಗಿ ಕದ ಹಾಕಿ ಡೈರಿಯ ರೂಪ ದಲ್ಲಿದ್ದ ಕಥಾಮೃತದ ಧ್ಯಾನದಲ್ಲಿ ತಲ್ಲೀನರಾಗಿಬಿಟ್ಟರು! ದ್ವಿತೀಯ ಪುತ್ರ ಚಾರುಬಾಬು ದುಶ್ಚಟಗಳಿಗೆ ಬಲಿಯಾದ. ತಂದೆಯು ಆತ ನನ್ನು ಕರೆದು ನಿರ್ದಾಕ್ಷಿಣ್ಯವಾಗಿ, "ನೋಡು, ನೀನು ನಿನ್ನ ಜೀವನೋಪಾಯವನ್ನು ಸಂಪಾದಿಸಲು ಯೋಗ್ಯನೂ ವಿದ್ಯಾ ವಂತನೂ ಆಗಿರುವೆ. ಈ ಮನೆಯ ಒಳಿತನ್ನು ಅನುಸರಿಸಿ

ನಡೆಸಿಕೊಳ್ಳಲಾಗದಿದ್ದರೆ ನಿನ್ನ ಇಚ್ಛೆಯಿದ್ದೆಡೆ ಹೋಗಿ ಬದುಕು" ಎಂದುಬಿಟ್ಟರು. ತಂದೆಯ ಈ ನುಡಿಗಳು ಮಗನ 'ಅಹಂ'ಗೆ ಪೆಟ್ಟು ನೀಡಿತು. ಕೂಡಲೆ ಆತ ಮನೆಯನ್ನು ತೊರೆದ. ಆದರೆ ಕೆಲ ತಿಂಗಳುಗಳ ನಂತರ ಆರ್ಥಿಕ ಅಡಚಣೆಯಿಂದಾಗಿ ತಂದೆಯ ಬಳಿ ಹಿಂತಿರುಗಿ ಮತ್ತೆ ಸಾಲವನ್ನು ಕೇಳಿದನು. ಮೂವತ್ತು ರೂಪಾಯಿಗಳನ್ನು ಸಾಲವಾಗಿ ಕೊಟ್ಟ ತಂದೆ ಮೂವತ್ತು ದಿನಗಳೊಳಗಾಗಿ ಅದನ್ನು ಹಿಂತಿರುಗಿಸುವಂತೆ ವಾಗ್ದಾನ ಮಾಡಿಸಿಕೊಂಡರು! ಮಾಂಸವನ್ನು ಕಾವಲು ಕಾಯುತ್ತಿರುವ ಹುಲಿಯೊಂದು ಅದರ ವಾಸನೆಯನ್ನೂ ಸಹ ಹೇಗೆ ಮೂಸುವುದಿಲ್ಲವೋ ಹಾಗಿತ್ತು ಅವರ ಸಾಂಸಾರಿಕ ಜೀವನ.

ಶ್ರೀರಾಮಚಂದ್ರನ ಬಂಟನಾದ ಹನುಮಂತನ ಮೈಮನಗಳಿರಲಿ, ಆ ರೋಮಕೂಪಗಳೂ ಕೂಡ ರಾಮ, ರಾಮ ಎನ್ನುತ್ತಿದ್ದವಂತೆ. ಮಾಸ್ಟರ್ ಮಹಾಶಯರ ಜೀವನವೂ ಅಂತೆಯೇ ಆ ಭಗವಂತನಲ್ಲಿ ಹಾಸುಹೊಕ್ಕಾಗಿತ್ತು ಎನ್ನುವುದಕ್ಕೆ ಒಂದು ನಿದರ್ಶನವೇ ಸಾಕ್ಷಿ. ಒಮ್ಮೆ ಅವರಿಗೆ ತೀವ್ರ ಅನಾರೋಗ್ಯ ಉಂಟಾಯಿತು. ವೈದ್ಯರು ಭಗವಂತನ ವಿಚಾರ ಮಾಡುವುದನ್ನು ಸ್ವಲ್ಪ ನಿಲ್ಲಿಸಬೇಕೆಂದು ಆಗ್ರಹಪಡಿಸಿದರು. ಮಹಾಶಯರ ಸ್ಥಿತಿ ನೀರಿನಿಂದ ಹೊರಬಿದ್ದ ಮೀನಿನಂತಾಗಿ ಜ್ವರವೂ ಹೆಚ್ಚಿತು. ಮತ್ತೊಬ್ಬ ಭಕ್ತ ವೈದ್ಯರು ಪರೀಕ್ಷಿಸಿ ಎಂದಿನಂತೆ ದೇವರ ಬಗ್ಗೆ ಮಾತನಾಡಲು ಅನುಮತಿಯಿತ್ತರು. ಆಶ್ಚರ್ಯ! ಜ್ವರವೂ ಬಿಟ್ಟಿತಲ್ಲದೆ ಮನಸ್ಸೂ ಶಾಂತವಾಯಿತು. ಈ ಘಟನೆಯನ್ನು ಕುರಿತು ಅವರು ಮುಂದೆ ನಗುತ್ತಾ, "ನನ್ನ ಜೀವನದ ಉಸಿರೇ ಭಗವಂತ. ಆತನ ವಿಚಾರ ಮಾತನಾಡದೆ, ಕೇಳದೆ ಹೇಗೆ ಈ ನಾಡಿಯು ಬಡಿಯುವುದು?" ಎನ್ನುತ್ತಿದ್ದರು.

ದೈವತ್ವದ ಸೋಪಾನವನ್ನು ಒಂದೊಂದೇ ಮೆಟ್ಟಲಿನಂತೆ ಏರುತ್ತಾ ಹೋದಂತೆ ಮಾನವನ ಅಂತರ್ಯದಲ್ಲಿರುವ ಆ ದಿವ್ಯಪ್ರೇಮ, ಕರುಣೆಯ ಬುಗ್ಗೆಯನ್ನು ಮುಸುಕಿರುವ ಸ್ವಾರ್ಥದ ಮುಸುಕು ಸರಿಯುತ್ತಾ ಬರುತ್ತದೆ. ಒಮ್ಮೆ ಮಾಸ್ಟರ್‌ರ ಶಾಲೆಯಲ್ಲಿ ಓದುತ್ತಿದ್ದ ಹುಡುಗನೊಬ್ಬ ಬಿದ್ದು, ಸಕಾಲದಲ್ಲಿ ವೈದ್ಯರ ನೆರವು ದೊರೆಯದ ಕಾರಣ ಜೀವನ ಪರ್ಯಂತ ಕುಂಟಬೇಕಾದ ಪರಿಸ್ಥಿತಿ ಉಂಟಾಯಿತು. ದಿನವೂ ಮೂರನೇ ಮಹಡಿಗೆ ಪಾಠಕ್ಕೆ ಹೋಗಲು ಹುಡುಗನಿಗೆ ಬಹಳ ತೊಂದರೆಯಾಗುತ್ತಿತ್ತು. ವಿಷಯ ತಿಳಿದ ಮಾಸ್ಟರ್ ಈ ಒಬ್ಬ ಹುಡುಗನಿಗಾಗಿ ಮೂರನೇ ಮಹಡಿಯಲ್ಲಿ ನಡೆಯುತ್ತಿದ್ದ ತರಗತಿಗಳನ್ನು ಶಾಶ್ವತವಾಗಿ ನೆಲಮಹಡಿಯಲ್ಲಿ ನಡೆಸುವ ವ್ಯವಸ್ಥೆ ಮಾಡಿದರು!

**ಶ್ರೀರಾಮಕೃಷ್ಣ ಕಥಾಮೃತ** ಎಂಬ ಈ ಅದ್ಭುತ ಗ್ರಂಥವು ಮೂಡಿಬಂದ ರೀತಿ ರೋಚಕ. ಮಾಸ್ಟರ್ ಕೇವಲ ತಮಗಾಗಿ ತಮ್ಮದೇ ಆದ ಶೀಘ್ರಲಿಪಿಯಲ್ಲಿ ಶ್ರೀರಾಮಕೃಷ್ಣರ ಮಾತುಗಳನ್ನು ಬರೆದುಕೊಳ್ಳುತ್ತಿದ್ದರು ಹಾಗೂ ಆ ಸಮಯದಲ್ಲಿ ಅದನ್ನು ಪ್ರಕಟಿಸುವ ಉದ್ದೇಶವೂ ಇರಲಿಲ್ಲ. ಎಷ್ಟೋ ವೇಳೆ ತಮ್ಮ ಪ್ರಾಪಂಚಿಕ ಕೆಲಸ ಕಾರ್ಯಗಳ ನಡುವೆ ದಕ್ಷಿಣೇಶ್ವರಕ್ಕೆ ಹೋಗಲಾಗುತ್ತಿರಲಿಲ್ಲ. ಅಂತಹ ದಿನಗಳಲ್ಲಿ ದಿನಚರಿಯಲ್ಲಿ ಬರೆದದ್ದರ ಮೇಲೆ ಧ್ಯಾನ ಮಾಡುತ್ತಿದ್ದರು.

ಅವರದೇ ಮಾತಿನಲ್ಲಿ ಈ ವೃತ್ತಾಂತವನ್ನು ಕೇಳೋಣ: "ನಾನು ಶ್ರೀರಾಮಕೃಷ್ಣರ ದಿವ್ಯಸಂದೇಶದ ಸ್ಮೃತಿಯನ್ನು ಹೊತ್ತು ಮನೆಗೆ ಹಿಂದಿರುಗುತ್ತಿದ್ದೆ. ನಂತರ ರಾತ್ರಿಯ ವೇಳೆ ಕುಳಿತು ಬರೆಯುತ್ತಿದ್ದೆ. ಕೆಲವೊಮ್ಮೆ ರಾತ್ರಿಯೆಲ್ಲಾ ಎಚ್ಚರವಿರಬೇಕಾಗುತ್ತಿತ್ತು. ಒಮ್ಮೊಮ್ಮೆ ಒಂದು ದಿನದ ಘಟನೆಯನ್ನು ಬರೆಯಲು ಏಳೆಂಟು ದಿನಗಳು ಬೇಕಾಗುತ್ತಿತ್ತು. ಹಾಡುಗಳು, ಸಮಾಧಿಯ ದೃಶ್ಯ ಎಲ್ಲವನ್ನೂ ಮತ್ತೊಮ್ಮೆ ಅನುಭವಿಸಿ ಬರೆಯಬೇಕಾಗುತ್ತಿತ್ತು. ಒಮ್ಮೊಮ್ಮೆ ಒಂದೊಂದು ದೃಶ್ಯದ ಮೇಲೂ ಒಂದು ಸಾವಿರ ಬಾರಿ ಧ್ಯಾನ ಮಾಡುತ್ತಿದ್ದೆ, ಅದರ ಗೂಢಾರ್ಥವನ್ನು ತಿಳಿಯಲು. ಎಷ್ಟೋ ಬಾರಿ ನನಗೆ ಅವುಗಳ ಗೂಢಾರ್ಥವು ತಿಳಿಯದಿದ್ದರೆ ಠಾಕೂರರ ಧ್ಯಾನದಲ್ಲಿ ತಲ್ಲೀನನಾಗುತ್ತಿದ್ದೆ. ಕೂಡಲೆ ಮಿಂಚಿನಂತೆ ಎಲ್ಲವೂ ಅರ್ಥವಾಗುತ್ತಿತ್ತು." ಶ್ರೀರಾಮಕೃಷ್ಣರ ಮಹಾಸಮಾಧಿಯ ಅನಂತರ ಅವರ ಶಿಷ್ಯರೆಲ್ಲರ ಒತ್ತಾಯಕ್ಕೆ ಮಣಿದು ಅದನ್ನು ಪ್ರಕಟಿಸುವ ಆಲೋಚನೆ ಮಾಡಿದರು. ತಮ್ಮ ಜೀವಿತದ ಕೊನೆಯ ಮೂವತ್ತೈದು ವರ್ಷಗಳು ಸತತವಾಗಿ ದುಡಿದ ಪರಿಣಾಮವೇ 'ಕಥಾಮೃತ'ವೆಂಬ ಮಹಾನ್ ಕೃತಿ.

ಈ ಮಹಾಕಾರ್ಯದಿಂದ ಅವರ ಜೀವನವೂ ಕೃತಕೃತ್ಯವಾಯಿತು. ಶ್ರೀಶಾರದಾದೇವಿಯವರ ಪರಮ ಕೃಪೆಗೆ ಅವರು ಪಾತ್ರರಾದರು. ಒಮ್ಮೆ ಕಾಳೀಪೂಜೆಯ ದಿನ ಶ್ರೀಮಾತೆಯವರು ಕಥಾಮೃತದ ಪಠನವನ್ನು ಕೇಳಿ ಸಂಪೂರ್ಣವಾಗಿ ಅದರಲ್ಲೇ ತನ್ಮಯರಾದರು. ಅನಂತರ ಆನಂದದಿಂದ ಮಾಸ್ಟರ್ ಕಾರ್ಯವನ್ನು ಪ್ರಶಂಸಿಸುತ್ತಾ ಅವರ ಧರ್ಮಪತ್ನಿ ನಿಕುಂಜಾದೇವಿಗೆ, "ಓ, ನನ್ನ ಪ್ರಿಯ ಸೊಸೆಯೇ, ಆತನಿಗೆ ಇನ್ನೂ ಹೆಚ್ಚು ಆರೋಗ್ಯ ಶಕ್ತಿಗಳು ಬರುವಂತೆ ಚೆನ್ನಾಗಿ ನೋಡಿಕೋ. ಕುಡಿಯಲು ಹೆಚ್ಚು ಹಾಲನ್ನು ಕೊಡು. ಇನ್ನು ಮುಂದೆ ನಾನು ದಿನವೂ ಈ ಪುಸ್ತಕದ ಪಠನವನ್ನು ಆಲಿಸುವೆ. ನನ್ನ ಹೃದಯದ ಅಂತರಾಳದಿಂದ ಆತನನ್ನು ಆಶೀರ್ವದಿಸಿರುವೆನೆಂದು ಹೇಳು." ಹೀಗೆ ಆ ಲೀಲಾವತಾರದ ಒಂದು ಭಾಗವಾದ ಶಕ್ತಿಸ್ವರೂಪಿಣಿಯ ರಕ್ಷಾಕವಚದಿಂದ ಆವೃತರಾದ ಅವರ ಜೀವನ ಧನ್ಯವಾಯಿತು.

ಸ್ವಾಮಿ ವಿವೇಕಾನಂದರು ಮಹೇಂದ್ರನಾಥರಿಗೆ ಬರೆದ ಒಂದು ಪತ್ರದಲ್ಲಿ ಹೀಗೆ ಉದ್ಗರಿಸಿದ್ದಾರೆ: "ಕಥಾಮೃತವು ನಿಜವಾಗಿಯೂ ಅದ್ಭುತವಾಗಿದೆ! ಇದರಲ್ಲಿ ಒಂದು ನೂತನತೆ ಇದೆ. ಹಿಂದೆಂದೂ ಈ ರೀತಿ ಗ್ರಂಥಕರ್ತನ ಮನಸ್ಸಿನಿಂದ ವಿಕೃತಗೊಳ್ಳದೆ ಆಚಾರ್ಯಶ್ರೇಷ್ಠನ ಜೀವನವು ಸಾರ್ವಜನಿಕರ ಮುಂದೆ ಚಿತ್ರಿತವಾಗಿರಲಿಲ್ಲ. ಭಾಷೆಯೂ ಪ್ರಶಂಸೆಗೆ ನಿಲುಕದುದಾಗಿದೆ. ಅದು ನೂತನವೂ ಹರಿತವೂ ಆಗಿದೆ ಹಾಗೂ ಅಷ್ಟೇ ಸ್ಪಷ್ಟವೂ ಸರಳವೂ ಆಗಿದೆ. ಅದನ್ನು ಓದಿ ಎಂಥ ಆನಂದವಾಯಿತೆಂಬುದನ್ನು ನಾನು ಮಾತಿನ ಮೂಲಕ ವಿವರಿಸಲಾರೆ. ಅದನ್ನು ಓದುವಾಗ ನಾನು ಯಾವುದೋ ಬೇರೆ ಲೋಕದಲ್ಲಿ ಇರುವಂತೆ ಅನಿಸಿತು! ನಿಜವಾಗಿಯೂ

ಆಶ್ಚರ್ಯವಲ್ಲವೆ! ನಮ್ಮ ಗುರು ಮತ್ತು ಪ್ರಭು ತುಂಬ ಅಪೂರ್ವ ವ್ಯಕ್ತಿ ಮತ್ತು ನಮ್ಮಲ್ಲಿ ಪ್ರತಿಯೊಬ್ಬರಲ್ಲಿಯೂ ಅಪೂರ್ವತೆ ಇರಬೇಕು, ಇಲ್ಲದಿದ್ದರೆ ನಾವು ಅಕಿಂಚನರಾಗುತ್ತೇವೆ. ಇದಕ್ಕೆ ಮುಂಚೆ ಅವರ ಜೀವನವನ್ನು ಕುರಿತು ಬರೆಯಲು ನಮ್ಮಲ್ಲಿ ಯಾರೂ ಪ್ರಯತ್ನಿಸದಿದ್ದುದು ಏಕೆಂದು ಈಗ ನನಗೆ ಅರ್ಥ ವಾಯಿತು. ಈ ಮಹತ್ಕಾರ್ಯವು ನಿಮಗಾಗಿಯೇ ಮೀಸ ಲಾಗಿತ್ತು. ಅವರು ನಿಶ್ಚಿತವಾಗಿಯೂ ನಿಮ್ಮೊಡನಿರುವರು.

"ಸಾಕ್ರಟೀಸನ ಸಂಭಾಷಣೆಗಳೆಲ್ಲ ಪ್ಲೇಟೋಮಯವೆ. ಆದರೆ ನೀವು ಸಂಪೂರ್ಣ ಗುಪ್ತವಾಗಿರುವಿರಿ. ಅಷ್ಟೇ ಅಲ್ಲದೆ ನಾಟಕೀಯ ಅಂಶವು ಅತ್ಯಂತ ಸುಂದರವಾಗಿದೆ. ಇಲ್ಲಿಯಾಗಲಿ, ಪಶ್ಚಿಮದಲ್ಲಾಗಲಿ ಪ್ರತಿಯೊಬ್ಬರೂ ಇದನ್ನು ಇಷ್ಟಪಡುತ್ತಾರೆ."

ಕಥಾಮೃತದ ಮುದ್ರಣದ ಕಾರ್ಯಭಾರವನ್ನು ವಹಿಸಿದ ಸ್ವಾಮಿ ನಿತ್ಯಾತ್ಮಾನಂದರ ಅನೇಕ ಕೆಲಸಗಳ ಮಧ್ಯೆ ಐದನೇ ಭಾಗದ ಕರಡಚ್ಚು ತಿದ್ದುಪಡಿಯ ಕಾರ್ಯ ನಿಧಾನವಾಗುತ್ತಿತ್ತು. ಸ್ವಾಮಿ ನಿತ್ಯಾತ್ಮಾನಂದರ ಮಾತಿನಲ್ಲಿ : "ಕಥಾಮೃತದ ಕರಡಚ್ಚು ತಿದ್ದುವ ಹೊಣೆಗಾರಿಕೆ ನನ್ನದಾಗಿತ್ತು. ಆದರೆ ಅನೇಕ ಕಾರ್ಯಗಳ ನಡುವೆ ಐದನೇ ಭಾಗ ಬಂದು ತುಂಬ ದಿನಗಳಾಗಿದ್ದರೂ ತಿದ್ದ ಲಾಗಲೇ ಇಲ್ಲ. ಒಮ್ಮೆ ರಾತ್ರಿ ಒಂದು ಗಂಟೆಯಲ್ಲಿ 'ಮ'ರ ಕೋಣೆಯಲ್ಲಿ ದೀಪ ಉರಿಯುತ್ತಿರುವುದು ನೋಡಿದೆ. ಅವರು ವಿಪರೀತ ಅನಾರೋಗ್ಯದಿಂದ ನರಳುತ್ತಿದ್ದರು. ಆದರೆ ಅಲ್ಲಿ ನೋಡಿದ್ದೇನು! ಸೀಮೆಎಣ್ಣೆ ಬುಡ್ಡಿಯ ಬೆಳಕಿನಲ್ಲಿ ಕರಡಚ್ಚು ತಿದ್ದುತ್ತಿದ್ದರು. ಕಣ್ಣುಗಳಿಂದ ನೀರು ಸುರಿಯುತ್ತಿತ್ತು. ಪ್ರೀತಿಯಿಂದ ಗದರಿದೆ. ಅದಕ್ಕವರು 'ಜನರು ಈ ಪುಸ್ತಕವನ್ನು ಓದಿ ಶಾಂತಿ ಪಡೆಯುತ್ತಿದ್ದಾರೆ. ಪ್ರಪಂಚದಲ್ಲಿ ಅದೆಷ್ಟು ನೋವಿದೆ ಎಂದು ನಾವೇ ಅನುಭವಿಸಿದ್ದೇವೆ. ಆದರೂ ಈ ಗ್ರಂಥದಿಂದ ಅದನ್ನು ಮರೆತಿರುವೆ. ಈ ದೇಹವು ಒಂದಲ್ಲ ಒಂದು ದಿನ ಕೊನೆಗಾಣಲೇ ಬೇಕು. ಆದ್ದರಿಂದ ಪುಸ್ತಕವು ಬೇಗ ಬರಲಿ ಎಂದು ನನ್ನಾಸೆ' ಎಂದರು."

ಬಂಗಾಳಿಯಲ್ಲಿ ಕಥಾಮೃತವು ಐದು ಭಾಗಗಳಾಗಿ ಪ್ರಕಟ ಗೊಂಡವು. ಐದನೇ ಭಾಗದ ಕರಡಚ್ಚು ಓದಿ ಮುಗಿಸು ತ್ತಿದ್ದಂತೆಯೇ ತಾವು ಇಹಲೋಕಕ್ಕೆ ಬಂದ ಉದ್ದೇಶ ಪೂರ್ಣ ವಾಯಿತೋ ಎಂಬಂತೆ 'ಮ'ರವರು ಕೊನೆಯುಸಿರೆಳೆದರು. ಫಲ ಹಾರಿಣಿ ಕಾಳೀ ಪೂಜೆಯ ಮರುದಿವಸ ಬೆಳಗಿನ ಜಾವ ನಾಲ್ಕು ಗಂಟೆಗೇ "ಗುರು ದೇವ! ಮಾ! ನನ್ನನ್ನು ನಿಮ್ಮ ಮಡಿಲಲ್ಲಿ ಕರೆದುಕೊಳ್ಳಿ" ಎನ್ನುತ್ತಾ ತಮ್ಮ ಇಷ್ಟದೇವರಲ್ಲಿ ಲೀನವಾದರು.

ಐವತ್ತು ವರ್ಷಗಳ ಕಾಲ ಒಂದು ನಕ್ಷತ್ರವು, ಜೀವನವೆಂಬ ಹಾದಿಯಲ್ಲಿ ಸೋತು ಬಸವಳಿದು ನಡೆಯುತ್ತಿರುವ ಪ್ರಯಾಣಿಕರಿಗೆ ಬೆಳಕನ್ನು ನೀಡುತ್ತಾ ಕಣ್ಮರೆಯಾಯಿತು. ನಾರದರಂತೆ ಇವರು ರಾಮಕೃಷ್ಣರ ಗುಣಗಾನ ಮಾಡದಿದ್ದರೆ ಕಥಾಮೃತದ ಪಾನ ಸವಿ ಯಲು ದೊರೆಯುತ್ತಿತ್ತೇ?

## 'ವಚನವೇದ'ವನ್ನು ಕುರಿತು

**ನ**ನಗೆ ತಿಳಿದಿರುವಂತೆ ಸಂತಸಾಹಿತ್ಯ(Hagiography) ದಲ್ಲಿಯೇ ಇದೊಂದು ವಿಶಿಷ್ಟ ಕೃತಿಯಾಗಿದೆ. ಯಾವ ಸಂತನೂ ಇಂತಹ ಸಮರ್ಥ, ಶ್ರಮವರಿಯದ ವರದಿಕಾರನನ್ನು ಪಡೆದಿರ ಲಿಲ್ಲ. ಹಿಂದೆಂದೂ ಯೋಗಿಯೊಬ್ಬನ ದೈನಂದಿನ ಕಿರುಘಟನೆ ಗಳೂ ಇಷ್ಟು ಸೂಕ್ಷ್ಮ ವಿವರಣೆಗಳೊಡನೆ ವಿವರಿಸಲ್ಪಟ್ಟಿರಲಿಲ್ಲ. ಹಿಂದೆಂದೂ ಶ್ರೇಷ್ಠ ಧಾರ್ಮಿಕ ಗುರುವೊಬ್ಬನ ಸಾಮಾನ್ಯ ಅಸಂಸ್ಕೃತ ಮಾತುಗಳನ್ನೂ ಕೂಡ ಇಷ್ಟು ಯಥಾರ್ಥವಾಗಿ ಬರವಣಿಗೆಗೆ ಇಳಿಸಿರಲಿಲ್ಲ. ಈ ಸಂಭಾಷಣೆಗಳಲ್ಲಿ ಗಹನ ಆಧ್ಯಾತ್ಮಿಕ ತತ್ತ್ವಗಳ ಜೊತೆಜೊತೆಗೇ.... ಹಾಸ್ಯರಸವೂ ಇದೆ. ಇಲ್ಲಿ ಹಳೆಯ ಹಿಂದೂ ಪೌರಾಣಿಕ ವಿಚಾರಗಳು ಆತ್ಯಂತಿಕ ಸತ್ಯಕ್ಕೆ ಸಂಬಂಧಪಟ್ಟ ಅತಿ ಗಂಭೀರ ಭಾವನೆಗಳಿಗೆ ಎಡೆಮಾಡಿಕೊಡುತ್ತವೆ. ಇದನ್ನು ಓದುವು ದೆಂದರೆ ನಮ್ರತೆ, ಸಹಿಷ್ಣುತೆ ಮತ್ತು ವಿಚಾರಪರತೆಯ ಒಂದು ಉದಾರ ಶಿಕ್ಷಣವನ್ನು ಪಡೆದಂತೆಯೆ. —ಆಲ್ಡಸ್ ಹಕ್ಸ್ಲೇ

**ನಾ**ನು ಶ್ರೀರಾಮಕೃಷ್ಣ ವಚನವೇದದ ಕೆಲವು ಆಹ್ಲಾದಕರ ವಾದ ಭಾಗಗಳನ್ನು ಓದಿರುವೆನು. ಈ ಅದ್ಭುತ ಪುಸ್ತಕದಲ್ಲಿ ಅಸಾಧಾರಣವಾದ ಸತ್ಯದರ್ಶನಗಳಿವೆ. ಅದನ್ನು ಓದುವಾಗ ಶ್ರೀರಾಮಕೃಷ್ಣರು ನಮ್ಮ ಪರಮ ಮಿತ್ರರಾಗುತ್ತಾರೆ. ಅವರ ಮುಕ್ತ ಪರಿಶುದ್ಧ ಭಾವಪೂರ್ಣ ಭಕ್ತಿ ನಮ್ಮನ್ನು ವಿನೀತರನ್ನಾಗಿಸುತ್ತದೆ, ನಮ್ಮನ್ನು ಸಂಸ್ಕರಿಸುತ್ತದೆ. ಅವರು ಸಾಮಾನ್ಯ ಮರ್ತ್ಯರಲ್ಲ. ಅವರು ಅದ್ಭುತ ಪ್ರತಿಭೆಯಿಂದ ಕೂಡಿದ ವ್ಯಕ್ತಿ. ಅವರ ಸನ್ನಿಧಿಯೇ ಸ್ವರ್ಗ. ವಚನವೇದದಲ್ಲಿ ಬರುವ ಅವರ ಸಂಭಾಷಣೆಗಳು ಮನಮೋಹಕ, ಸ್ಫೂರ್ತಿಯಿಂದ ಹೊರಹೊಮ್ಮಿದವುಗಳು. ಅವುಗಳ ಸಾಹಿತ್ಯಿಕ ಶೋಭೆಯ ಹಿಂದೆ ಶ್ರೀರಾಮಕೃಷ್ಣರ ಸಾಧುತ್ವದ ಸ್ಫೂರ್ತಿಯಿದೆ. —ಮಹಮದ್ ದಾವೂದ್ ರಹಬಾರ್

ಶ್ರೀರಾಮಕೃಷ್ಣ ವಚನವೇದವು ಆಧುನಿಕ ಹಿಂದೂ ಪ್ರವಾದಿಯ ತಥ್ಯಪೂರ್ಣ ಆಧ್ಯಾತ್ಮಿಕ ಜ್ಞಾನದ ಬಗ್ಗೆ ಆಳವಾದ ತಿಳಿವಳಿಕೆಯನ್ನು ಪಾಶ್ಚಾತ್ಯ (ಮತ್ತು ಪ್ರಾಚ್ಯ) ಓದುಗರಿಗೆ ನೀಡು ತ್ತದೆ. ಸೂಕ್ಷ್ಮ ಮತ್ತು ಶಿಸ್ತಿನಿಂದ ಕೂಡಿದ ಅನುಭಾವಿಯೊಬ್ಬನ ಸತ್ಯದ ಆಧ್ಯಾತ್ಮಿಕ ನಿಕಟ ಅನುಭವಗಳನ್ನು ಇದರಲ್ಲಿ ಕಾಣ ಬಹುದು. ಎಲ್ಲ ಧರ್ಮಗಳ ಮೂಲಭೂತ ಸಮನ್ವಯತೆಯನ್ನು ಕುರಿತಂತೆ ಬೇರೆಲ್ಲಿಯೂ ಕಂಡುಬರದಂತಹ ಆಳ ಮತ್ತು ವಿಶಾಲ ತಿಳಿವಳಿಕೆಯನ್ನು ಇದರಲ್ಲಿ ಕಾಣುತ್ತೇವೆ. ಭಾರತದ ಯಥಾರ್ಥ ಆಧ್ಯಾತ್ಮಿಕ ಸಂಸ್ಕೃತಿಯ ಸುಸ್ಪಷ್ಟ ಚಿತ್ರವು ಇದರಲ್ಲಿ ಕಂಡುಬರು ತ್ತದೆ. ದೈನಂದಿನ ಜೀವನಕ್ಕೆ ಸಂಬಂಧಪಟ್ಟಂತೆ ಹೊಸ ಆಧ್ಯಾತ್ಮಿಕ ದೃಷ್ಟಿಕೋನವನ್ನು ಕುರಿತಾದ ಉಪಯುಕ್ತ ಸಲಹೆಗಳು ಇದ ರಲ್ಲಿವೆ.

(ಜಗತ್ತಿನ ಐವತ್ತು ಅಸಾಧಾರಣ ಧಾರ್ಮಿಕ ಪುಸ್ತಕಗಳಲ್ಲಿ 'ಶ್ರೀರಾಮಕೃಷ್ಣ ವಚನವೇದ'ವು ಒಂದೆಂದು ಧಾರ್ಮಿಕ ಪುಸ್ತಕಗಳ ದುಂಡುಮೇಜು ಪರಿಷತ್ತು ನಿರ್ಣಯಿಸಿದಾಗ)